ಸಂಗತಿಯಾಗಿ ತೋಚುವುದು ಸಹಜ. ಆದರೆ, ಸ್ವಸ್ಥ ಮನಸ್ಸುಗಳಿಂದ ಸ್ವಸ್ಥ ದೇಶವೂ ಅಹುದೆನ್ನುವ ಪರಿಕಲ್ಪನೆ ವಾಸ್ತವಕ್ಕೆ ದೂರವಾದುದೇನೂ ಅಲ್ಲ.

ಇದಕ್ಕೆ ತದ್ವಿರುದ್ಧವಾದ ಇನ್ನೊಂದು ಸ್ಥಿತಿಯನ್ನು ಗಮನಿಸೋಣ. ಅಫ್ಘಾನಿಸ್ತಾನವನ್ನು ಇತ್ತೀಚೆಗೆ ವಶಕ್ಕೆ ಪಡೆದಿರುವ ತಾಲಿಬಾನ್ ಪಡೆ, ಸಂಗೀತ–ಚಿತ್ರಕಲೆಗಳ ಮೇಲೆ ನಿಷೇಧ ಹೇರಿರುವುದನ್ನು ಕೇಳಿದ್ದೇವೆ. ಹಿಂದೆಯೂ ಜರ್ಮನಿಯ ನಾಜಿ ಸರ್ಕಾರ, ಮಾವೋವಾದಿ ಚೈನಾ, ರಷ್ಯಾದಂಥ ರಾಷ್ಟ್ರಗಳು ಆಯಾ ಕಾಲಘಟ್ಟದಲ್ಲಿ ಹಲವು ಕಲಾಪ್ರಕಾರಗಳನ್ನು ಪ್ರತಿಬಂಧಿಸಿದ್ದವು. ಈ ಎಲ್ಲಾ ದೇಶಗಳು ಆ ಸಂದರ್ಭಗಳಲ್ಲಿ ಅನುಸರಿಸುತ್ತಿದ್ದ ರಾಜನೀತಿಯನ್ನು ಅವಲೋಕಿಸಿದಾಗ, ಸೃಜನಶೀಲ ಅಭಿವ್ಯಕ್ತಿಯನ್ನು ಹತ್ತಿಕ್ಕುವ ಹಿಂದಿರುವ ಪ್ರಭುತ್ವದ ಉದ್ದೇಶ ಮನವರಿಕೆಯಾಗುತ್ತದೆ. ಇನ್ನೊಂದೆಡೆ, ಜಪಾನ್‌ನಂತಹ ದೇಶ ತನ್ನ ರಾಷ್ಟ್ರ ನಿರ್ಮಾಣದ ಪ್ರಕ್ರಿಯೆಯಲ್ಲಿ ಮಾಂಗಾದಂತಹ ಕಲೆಯನ್ನು (ಅಳಿಲು ಸೇವೆಯಂತೆ ಅಂದುಕೊಂಡರೂ) ಧನಾತ್ಮಕವಾಗಿ ಬಳಸಿಕೊಂಡಿರಬಹುದಾದ ಸಾಧ್ಯತೆ ನಿಚ್ಚಳವಾಗುತ್ತದೆ.

ಇನ್ನು, ಜಪಾನಿಗರು ಮುಗಿಬಿದ್ದು ಓದುವ ಮಾಂಗಾದ ಕಥಾವಸ್ತುಗಳನ್ನು ಲಕ್ಷಿಸೋಣ. ಜನಪ್ರಿಯತೆ ಹೊಂದಿದ ಕೆಲ ಮಾಂಗಾ ಧಾರಾವಾಹಿಗಳನ್ನು ಗಮನಿಸಿದರೆ, ನಾಯಕನ ವೈಭವೀಕರಣದಂತ ಸಿದ್ಧಸೂತ್ರಕ್ಕೆ ಅವು ಜೋತುಬೀಳದಿರುವುದನ್ನು ಕಾಣಬಹುದು. ಅಲ್ಲಿಯ ಮುಖ್ಯ ಪಾತ್ರ ಕೂಡ ಉಳಿದವರಂತೆ ಸಾಮಾನ್ಯನೇ ಆಗಿರುತ್ತಾನೆ. ಆತನೂ ಕಾಮ, ಕ್ರೋಧ, ಅಸಹಾಯಕತೆ, ಅಸೂಯೆ ಇತ್ಯಾದಿ ಗುಣಲೇಪಿತನೇ. 'ವನ್ ಪಂಚ್ ಮ್ಯಾನ್' ಅನ್ನುವ ಮಾಂಗಾ ಧಾರಾವಾಹಿಯಲ್ಲಿ, ಅದರ ನಾಯಕ ಪರಿಶ್ರಮದಿಂದ ಒಂದು ವಿಶೇಷ ಶಕ್ತಿಯನ್ನು ತನ್ನದಾಗಿಸಿಕೊಂಡಿರುತ್ತಾನೆ. ಆತ ನೀಡುವ ಒಂದೇ ಒಂದು 'ಪಂಚ್' ಅದೆಷ್ಟು ಪ್ರಬಲವೆಂದರೆ, ಎದುರಾಳಿ ಸತ್ತೇ ಹೋಗಬೇಕು ಅಥವಾ ಎದ್ದೇಳಲಾರದಷ್ಟು ಜರ್ಜರಿತನಾಗಿ ಕುಸಿಯಬೇಕು. ಆದರೆ, ಈ ಏಕ ಮುಷ್ಟಿ ಪ್ರಹಾರಕನಿಗೆ ತನ್ನ ಶಕ್ತಿಯ ಬಗ್ಗೆ ಖುಷಿಯಿಲ್ಲ. ಯಾವುದೇ ಜಗಳ, ಹೊಡೆದಾಟವಾದರೂ ಈತನ ವಿರೋಧಿ ಒಂದೇ ಏಟಿಗೆ ಕುಸಿದು ಬೀಳುತ್ತಾನಾದ್ದರಿಂದ ಆತನಿಗೆ ಬಡಿದಾಟದ ಮಜವೇ ಸಿಗುತ್ತಿಲ್ಲ. ಎಲ್ಲರೊಡನೆ ಭರ್ಜರಿ ಸೆಣೆಸಾಡಿ ಜಯಿಸುವ ಬಯಕೆ ಆತನದು. ಆದರೆ, ಆ ಗೆಲುವು ಸುಲಭದಲ್ಲಿ ದಕ್ಕಿದಾಗ ನಿರಾಶೆಗೊಳಗಾಗುತ್ತಾನೆ. ಹೀಗಾಗಿ, ತಾನೇ ಗಳಿಸಿದ ಅಸಾಮಾನ್ಯ ಸಾಮರ್ಥ್ಯವನ್ನು ಕಳೆದುಕೊಳ್ಳಲು ಹರಸಾಹಸ ಪಡುತ್ತಾನೆ. ಕೈಯನ್ನು ಬೆನ್ನ ಹಿಂದೆ ಹಗ್ಗದಿಂದ ಕಟ್ಟಿಕೊಂಡು ಓಡಾಡುತ್ತಾನೆ. ಖಿನ್ನತೆಗೆ ಒಳಗಾಗಿ ವೈದ್ಯರಲ್ಲಿ ಹೋಗುತ್ತಾನೆ... ಹೀಗೆ.

ಕಳೆದ ಹದಿನೈದು ವರ್ಷಗಳಿಂದ ಸತತವಾಗಿ ಬರುತ್ತಿರುವ 'ಏಸ್ ಆಫ್ ಡೈಮಂಡ್' ಎನ್ನುವ ಬೇಸ್‌ಬಾಲ್ ಕ್ರೀಡೆಯ ಕುರಿತಾದ ಧಾರಾವಾಹಿಯಲ್ಲಿರುವುದು ಕೇವಲ ಸೋಲುವ ತಂಡದ ಕಥೆಗಳೇ. ಅವರು ಪಟ್ಟ ಪಾಡು, ಹೋರಾಟ, ನಿರಾಶೆ, ಅವಮಾನ ಇತ್ಯಾದಿಗಳ ಚಿತ್ರಣವೇ ಅದರಲ್ಲಿದೆ. ಗೆಲ್ಲುವ ತಂಡದ ಬಗ್ಗೆ ಅವರಿಗೆ ಹೆಚ್ಚಿನ ಆಸ್ಥೆಯಿಲ್ಲ. ಫುಟ್‌ಬಾಲ್ ಆಟದಲ್ಲಿ ಹೀರೊ ಆಗಿ ಬಿಂಬಿತನಾಗುವ ಗೋಲು ಗಳಿಸುವ ವ್ಯಕ್ತಿಗಿಂತ, ಬಾಲ್ ಪಾಸ್ ಮಾಡುವ ಸಹ ಆಟಗಾರನನ್ನು ಕೇಂದ್ರವಾಗಿಸಿ ಹೆಣೆದ ಮಾಂಗಾ ಕಥೆಗಳು ಜನಮನ್ನಣೆ ಗಳಿಸುತ್ತವೆ. ಈ ಉದಾಹರಣೆಗಳೆಲ್ಲ ಯಾಕೆ? ಭಾರತದಲ್ಲೂ ಸಾಕಷ್ಟು ಪ್ರಚಲಿತವಿರುವ 'ಡೋರೇಮೊನ್' ಎನ್ನುವ ಮಕ್ಕಳ ಕಾರ್ಟೂನನ್ನೇ ತೆಗೆದುಕೊಳ್ಳಿ. ಅದರಲ್ಲಿಯ ಮುಖ್ಯ ಪಾತ್ರವಾದ ನೊಬಿತಾ ಎನ್ನುವ ಹುಡುಗ, ಶಕ್ತಿಮಾನನಾಗಿ ಗುಡ್ಡ ಕುಟ್ಟಿ ಪುಡಿಗೈಯುವುದಿಲ್ಲ. ಏನೋ ಮಾಡಹೋಗಿ ಮತ್ತೇನೋ ಎಡವಟ್ಟು ಮಾಡಿಕೊಂಡು ಪೇಚಿಗೆ ಸಿಲುಕಿಕೊಳ್ಳುತ್ತಲೇ ಇರುತ್ತಾನೆ.

ಹಾಗಾದರೆ, ಜಗತ್ತಿನ ಅತಿ ಮುಂದುವರಿದ ರಾಷ್ಟ್ರಗಳಲ್ಲಿ ಒಂದಾದ ಜಪಾನ್, ತನ್ನ ಅಂತರಂಗದಲ್ಲಿ